ಕರ್ಮವೀರ ಓದಿರಿ

ಭಾರತೀಯ ಹತ್ತಿ ನಿಗಮ ನಿಯಮಿತ
(ಭಾರತ ಸರ್ಕಾರದ ಸ್ವಾಮಿತ್ವದ ಸಂಸ್ಥೆ) (ಜವಳಿ ಮಂತ್ರಾಲಯ)
ಭಾರತೀಯ ಕಪಾಸ ನಿಗಮ ಲಿಮಿಟೆಡ್: ಶಾ.ಕಾ. ಹುಬ್ಬಳ್ಳಿ
THE COTTON CORPORATION OF INDIA LTD, BO, HUBLI
(A Government of India Undertaking - Ministry of Textiles)
B O: 3rd Floor, W.B. Plaza, New Cotton Market, Hubli – 580029, Karnataka
Ph: 0836 – 2356353/354/355/357, Fax 0836-2251960
CIN No: U51490MH1970GOI014733 E-mail hubli@cotcorp.com Website:www.cotcorp.org.in Ministry web: www.texmin.nic.in

ಹತ್ತಿ ರೈತರಿಗೆ ಮನವಿ

ರಾಜ್ಯದ CCI ಕಪಾಸ್ ಕಿಸಾನ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ನೋಂದಾಯಿತ ಎಲ್ಲಾ ಹತ್ತಿ ರೈತರು 2025–26ರ ಪ್ರಸ್ತುತ ಹತ್ತಿ ಋತುವಿನಲ್ಲಿ MSP ಯೋಜನೆಯ ಪ್ರಯೋಜನವನ್ನು ಪಡೆಯಲು ಫೆಬ್ರುವರಿ 20, 2026ರಂದು ಅಥವಾ ಅದಕ್ಕೂ ಮೊದಲು ಸ್ಲಾಟ್ ಬುಕ್ ಮಾಡಿ ತಮ್ಮ ಹತ್ತಿಯನ್ನು ಮಾರಾಟ ಮಾಡಲು ಇಲ್ಲಿ ತಿಳಿಸಲಾಗಿದೆ. ಯಾವುದೇ ಹೆಚ್ಚಿನ ಮಾಹಿತಿ ಅಥವಾ ಸಹಾಯಕ್ಕಾಗಿ ರೈತರು ಶಾಖಾ ಕಚೇರಿಯ ಹುಬ್ಬಳ್ಳಿನ Whatsapp ಸಹಾಯವಾಣಿ ಸಂಖ್ಯೆ : 8123728267ಅನ್ನು ಸಂಪರ್ಕಿಸಬಹುದು.

ಶಾಖೆ ಮುಖ್ಯಸ್ಥ
20–02–2026 ಭಾರತೀಯ ಹತ್ತಿ ನಿಗಮ ನಿಯಮಿತ, ಶಾಖಾ ಕಚೇರಿ, ಹುಬ್ಬಳ್ಳಿ.

ಅಪ್ಸರಾ-ಹುಬ್ಬಳ್ಳಿ-CINEPOLIS | ಧಾರವಾಡ-INOX
ಸ್ವರೂಪ ನರ್ತಕಿ-ಗ್ಲೋಬ-ಕಪಿಲ-ಬೆಳಗಾವ-INOX | ಅಪ್ಸರಾ-ಬಿಜಾಪೂರ
ಸ್ಮಾರ್ಟಮೂವೀಸ್-ಬಾಗಲಕೋಟ | ಮ್ಯಾಗ್ನಮ್ -ನಿಪ್ಪಾಣಿ

SK CLASSIFIED
ಹುಬ್ಬಳ್ಳಿ ಆವೃತ್ತಿ ದರ

ಅಳತೆ	ದರ	ಕೊಡುಗೆ
4x5	790/-	3+1 - 5+2
4x10	1260/-	3+1 - 5+2

REQUIRED
STORE MANAGER -1 Position (Any Degree)
SALES EXECUTIVE -1 Position (PUC/Degree)
HELPER -1 Position
Contact :
L G ENTERPRISES
Madiman Complex, Neeligin Road, HUBBALLI-580029
9606953012
7676139007
9448846006

LOST DOCUMENT
ಕಲಘಟಗಿ ತಾಲೂಕಿನ ಕಾಮಧೇನು ಗ್ರಾಮದ ಉಗ್ಗಿನಕೆರೆ ಪಂಚಾಯಿತಿ ವ್ಯಾಪ್ತಿಗೆ ಒಳಗೊಂಡ ಆಸ್ತಿ ಸಂಖ್ಯೆ ನಂ. 280 ರ ಆಸ್ತಿಯ ದಾಖಲಾತಿಗಳಾದ ಹಕ್ಕು ಬಿಟ್ಟುಕೊಟ್ಟ ಪತ್ರ, ನೋಟರಿ ಒಳಗೊಂಡ ಆಸ್ತಿ ಖರೀದಿ ಪತ್ರ ಹಾಗೂ ಕಾಮಧೇನು ಗ್ರಾಮದ ಹಿರಿಯರ ಸಮ್ಮುಖದಲ್ಲಿ ಹಣದ ಲೇವಾದೇವಿ ಪತ್ರ ಕಳೆದುಹೋಗಿರುತ್ತವೆ. ಸಿಕ್ಕವರು ದಾಖಲಾತಿಗಳನ್ನು ದುರುಪಯೋಗ ಪಡಿಸಿಕೊಳ್ಳದೆ ಉಗ್ಗಿನಕೆರೆ ಗ್ರಾಮ ಪಂಚಾಯಿತಿಗೆ ಹಿಂತಿರುಗಿಸಬೇಕಾಗಿ ಕೇಳಿಕೊಳ್ಳುತ್ತೇವೆ.
9741827451

ಓದುಗರ ಗಮನಕ್ಕೆ: ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ. –ಜಾಹೀರಾತು ವ್ಯವಸ್ಥಾಪಕರು

NEFT (ನೆಫ್ಟ್) ಮೂಲಕ ಬ್ಯಾಂಕ್ ಖಾತೆಗೆ ಹಣ ಸಂದಾಯಿಸುವ ವಿವರ
1) A/c No. (ಖಾತೆ ಸಂ.) 0832000101347401
2) IFSC CODE (ಐಎಫ್‌ಎಸ್‌ಸಿ ಸಂಕೇತ): KARB 0000083
3) ಹಣ ಸಂದಾಯದ ಹೆಸರು: LOKA SHIKSHANA TRUST
4) ಬ್ಯಾಂಕ್ ಹೆಸರು : KARNATAKA BANK
BRANCH: KASTURBA ROAD, BANGALORE-560001.
5) ಸ್ವಿಫ್ಟ್ ಸಂಖ್ಯೆ: AATL 1086H
6) ವಿ.ಸೂ: ತಾವು ಜಮೆ ಮಾಡಿದ ಬೇ ಇನ್ ಸ್ಲಿಪ್ ಜೊತೆಗೆ ಪ್ರಕಟಿಸಬೇಕಾದ ಜಾಹೀರಾತನ್ನು ಸಂ.ಕ. ಕಚೇರಿಗೆ ಕಳುಹಿಸಬೇಕು.
* ಡಿ.ಡಿ. ತಳಸುವುದಿದ್ದಲ್ಲಿ ಸಂಯುಕ್ತ ಕರ್ನಾಟಕ ಹೆಸರಿನಲ್ಲಿ ತಳುಹಿಸಬೇಕು.

Edition	Bangalore	Gulburga	Davanagere	Mangalore	All Edition
*Disply Classified	Rs. 40-00	Rs.15-00	Rs. 15-00	Rs. 15-00	Rs.80-00

ಸಂಯುಕ್ತ ಕರ್ನಾಟಕ ಕ್ಲಾಸಿಫೈಡ್ಸ್
ಚಿಕ್ಕ ಜಾಹೀರಾತು.... ಅಗಾಧ ಫಲಿತಾಂಶ! ಜಾಹೀರಾತಿಗಾಗಿ ಸಂಪರ್ಕಿಸಿರಿ:
ಸಂಪರ್ಕಿಸಿರಿ: ಮೊ: 9900049656
ಇ-ಮೇಲ್: skhubli@gmail.com

ಹಿಂದೂ ಸಮಾಜದ ಉಳಿವಿಗಾಗಿ ಹೋರಾಟ। ಹಿಂದೂ ರಾಷ್ಟ್ರ ನಿರ್ಮಾಣ ಮಾಡುವಲ್ಲಿ ಶ್ರಮ

ಶಿವಾಜಿ ಮಹಾರಾಜರ ಜೀವನ ಎಲ್ಲರಿಗೂ ಪ್ರೇರಣೆ

ಕಂಪ್ಲಿ: ದೇಶದಲ್ಲಿ ಹಿಂದೂ ಸಮಾಜದ ಉಳಿವಿಗಾಗಿ ಹೋರಾಟ ಮಾಡಿದ, ಹಿಂದೂ ರಾಷ್ಟ್ರವನ್ನು ನಿರ್ಮಾಣ ಮಾಡುವಲ್ಲಿ ಶ್ರಮಿಸಿದ ಛತ್ರಪತಿ ಶಿವಾಜಿ ಮಹಾರಾಜ ಜೀವನ ಪ್ರತಿಯೊಬ್ಬರಿಗೂ ಪ್ರೇರಣೆಯಾಗಲಿ ಎಂದು ತಹಸಿಲ್ದಾರ್ ಜೂಗಲಾ ಮಂಜುನಾಯಕ ತಿಳಿಸಿದರು.

ಅವರು ಗುರುವಾರ ಪಟ್ಟಣದ ತಹಸಿಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲ್ಲೂಕು ಆಡಳಿತದಿಂದ ಏರ್ಪಡಿಸಿದ್ದ ಛತ್ರಪತಿ ಶಿವಾಜಿ ಮಹಾರಾಜ ಜಯಂತಿಯಲ್ಲಿ ಭಾವಚಿತ್ರಕ್ಕೆ ವಿಶೇಷ ಪೂಜೆಯನ್ನು ಸಲ್ಲಿಸಿ ಪುಷ್ಪಾರ್ಪಣೆ ಮಾಡಿ ಮಾತನಾಡಿದರು. ಶಿವಾಜಿ ಮಹಾರಾಜರು ಮರಾಠ ಸಾಮ್ರಾಜ್ಯದ ಸ್ಥಾಪಕ ಹಾಗೂ ಭಾರತದ ಶ್ರೇಷ್ಠ ಯೋಧರಲ್ಲಿ ಒಬ್ಬರಾಗಿದ್ದರು. 1630ರಲ್ಲಿ ಜನಿಸಿದ ಇವರು ಜೀಜಾಬಾಯಿ ಮತ್ತು ದಾದಾಜಿ ಕೊಂಡದೇವರಿಂದ ಶಿಕ್ಷಣ ಪಡೆದ ಇವರು ಗೆರಿಲ್ಲಾ ಯುದ್ಧ ತಂತ್ರ, ಬಲವಾದ ನೌಕಾಪಡೆ ಮತ್ತು ಹಿಂದವಿ ಸ್ವರಾಜ್ಯದ ಕನಸಿನೊಂದಿಗೆ ಮೊಘಲರು ಮತ್ತು ಆದಿಲ್ ಶಾಹಿಯನ್ನು ಎದುರಿಸಿ 1674ರಲ್ಲಿ ಛತ್ರಪತಿಯಾಗಿ ಪಟ್ಟಭಿಷೇಕ ಮಾಡಿಕೊಂಡರು. ಸಣ್ಣ ವಯಸ್ಸಿನಲ್ಲಿಯೇ ತೋರಣಕೋಟೆಯನ್ನು ವಶಪಡಿಸಿಕೊಂಡು ತಮ್ಮ ಶೌರ್ಯವನ್ನು ಪ್ರದರ್ಶಿಸಿದರು. ಇವರು ಅಷ್ಟಪ್ರಧಾನ ಮಂಡಳಿಯ ಮೂಲಕ ಸುಸಜ್ಜಿತ ಆಡಳಿತವನ್ನು ನೀಡಿದರು.

ಮಹಿಳೆಯರು, ರೈತರು ಮತ್ತು ಎಲ್ಲಾ ಧರ್ಮಗಳಿಗೆ ಗೌರವವನ್ನು ನೀಡುತ್ತಿದ್ದರು. ಛತ್ರಪತಿ ಶಿವಾಜಿ ಮಹಾರಾಜರು ಕೇವಲ ಯೋಧರಲ್ಲ, ಬದಲಾಗಿ ದೂರದೃಷ್ಟಿಯ ಆಡಳಿತಗಾರರಾಗಿದ್ದರು. ಅವರ ಧೈರ್ಯ ಮತ್ತು ದೇಶಭಕ್ತಿ ಇಂದಿಗೂ ಪ್ರೇರಣೆಯಾಗಿದೆ ಎಂದರು. ಕಾರ್ಯಕ್ರಮದಲ್ಲಿ ಉಪ ತಹಶೀಲ್ದಾರ್ ಬಿ. ರವೀಂದ್ರಕುಮಾರ್, ಶಿರಸ್ತೆದಾರರಾದ ಎಸ್.ಕೆ. ರಮೇಶ್, ಮಾಲತೇಶ ದೇಶಪಾಂಡೆ, ಸುರೇಶ್, ಲಕ್ಷ್ಮಣ ನಾಯಕ, ವೈಷ್ಣವಿ ಉಪ್ಪಾರ್, ರಾಧ ಸೇರಿದಂತೆ ಕಂದಾಯ ಇಲಾಖೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

ಕಂಪ್ಲಿ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಛತ್ರಪತಿ ಶಿವಾಜಿ ಮಹಾರಾಜ ಜಯಂತಿ ಆಚರಿಸಲಾಯಿತು.

ಛತ್ರಪತಿ ಶಿವಾಜಿ ಮಹಾರಾಜರು ಕೇವಲ ಯೋಧರಲ್ಲ, ಬದಲಾಗಿ ದೂರದೃಷ್ಟಿಯ ಆಡಳಿತಗಾರರು.

ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ

ಕುರುಗೋಡು : ಛತ್ರಪತಿ ಶಿವಾಜಿ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿಯಾಗಿದ್ದಾರೆ. ಬಾಲಗಂಗಾಧರ ತಿಲಕ್, ಸುಭಾಷ್ ಚಂದ್ರ ಬೋಸ್ ಮತ್ತು ವೀರ್ ಸಾವರ್ಕರ್ ತಮ್ಮ ಕ್ರಾಂತಿಕಾರಿ ಪ್ರಯತ್ನಗಳಿಗೆ ಶಿವಾಜಿ ಮಹಾರಾಜರನ್ನು ಸ್ಫೂರ್ತಿ ಪಡೆದು ಹೋರಾಟ ಮಾಡಿದ್ದರು ಎಂದು ಇತಿಹಾಸದಿಂದ ತಿಳಿದುಬರುತ್ತದೆ ಎಂದು ತಹಸೀಲ್ದಾರ್ ನರಸಪ್ಪ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ನಡೆದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಆಚರಣೆ ವೇಳೆ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಗ್ರೇಡ್ 2 ತಹಶೀಲ್ದಾರ್ ಮಲ್ಲೇಶಪ್ಪ ವಿಜಯಕುಮಾರ್, ಸಾಹಿತ್ಯ ಪರಿಷತ್ ಅಧ್ಯಕ್ಷ ನಾಗರಾಜ್ ಮಸೂತಿ, ಬಸವರಾಜ, ಹಾಗೂ ಸಿಬ್ಬಂದಿ ಮತ್ತು ಇತರರು ಇದ್ದರು.

ಕುರುಗೋಡು ತಾಲೂಕು ಕಚೇರಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ತಹಶೀಲ್ದಾರ್ ನರಸಪ್ಪ ಸಮ್ಮುಖದಲ್ಲಿ ಆಚರಿಸಲಾಯಿತು.

ನಿಧಿ ಆಪ್ಕೆ ನಿಕಟ್

ಬಳ್ಳಾರಿ: ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ಫೆ.27 ರಂದು ಬೆಳಿಗ್ಗೆ 09 ರಿಂದ ಸಂಜೆ 06 ಗಂಟೆಯವರೆಗೆ ಸುಪ್ರ ಸ್ಟೀಲ್ ಅಂಡ್ ಪವರ್ ಪ್ರೈ. ಲಿಮಿಟೆಡ್ ನ ಸಭಾಂಗಣದಲ್ಲಿ 'ನಿಧಿ ಆಪ್ಕೆ ನಿಕಟ್'ಕಾರ್ಯಕ್ರಮ ಏರ್ಪಡಿಸಲಾಗಿದೆ. ಉದ್ಯೋಗದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ, ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆದಾರರಿಗೆ ಲಭ್ಯವಿರುವ ಆನ್‌ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಸಹ ಒದಗಿಸಲಾಗುತ್ತದೆ.

ಹಾಗಾಗಿ ಕಾರ್ಮಿಕರು, ಪಿಂಚಣಿದಾರರು, ಉದ್ಯೋಗ ದಾತರು ಫೆ.27 ರಂದು ನಡೆಯುವ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವಿ ಪ್ರವೀಣ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಛತ್ರಪತಿ ಶಿವಾಜಿ ಜಯಂತಿ

ಎಮ್ಮಿಗನೂರು : ಗ್ರಾಮದ ಸರಕಾರಿ ಶತಮಾನ ಶಾಲೆಯಲ್ಲಿ ಗುರುವಾರ ಛತ್ರಪತಿ ಶಿವಾಜಿ ಜಯಂತಿ ಆಚರಿಸಲಾಯಿತು

ಈ ವೇಳೆ ಶಾಲೆಯ ಮುಖ್ಯ ಗುರು ಬಿ ಎಸ್ ಸದ್ಯೋಜಾತಪ್ಪ ಮಾತನಾಡಿ ಛತ್ರಪತಿ ಶಿವಾಜಿ ಅವರು ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿಯಾಗಿದ್ದಾರೆ. ಬಾಲಗಂಗಾಧರ ತಿಲಕ್, ಸುಭಾಷ್ ಚಂದ್ರ ಬೋಸ್ ಮತ್ತು ವೀರ್ ಸಾವರ್ಕರ್ ತಮ್ಮ ಕ್ರಾಂತಿಕಾರಿ ಪ್ರಯತ್ನಗಳಿಗೆ ಶಿವಾಜಿ ಮಹಾರಾಜರನ್ನು ಸ್ಫೂರ್ತಿ ಪಡೆದು ಹೋರಾಟ ಮಾಡಿದ್ದರು ಎಂದು ಇತಿಹಾಸದಿಂದ ತಿಳಿದುಬರುತ್ತದೆ ಹೇಳಿದರು. ಹಾಗೂ ಗಿರಿಲ್ಲ ಯುದ್ಧದ ಮುಖಾಂತರ ಎದುರಾಳಿಗಳನ್ನು ಸದೆ ಬಡಿದು, ಹಿಂದೂ ಸಾಮ್ರಾಜ್ಯದ ಸ್ಥಾಪನೆಗೆ ಕಾರಣರಾದ ಚಕ್ರವರ್ತಿ ಎಂದರು

ಪೂರ್ವದಲ್ಲಿ ಛತ್ರಪತಿ ಶಿವಾಜಿ ಭಾವಚಿತ್ರಕ್ಕೆ ಅವರ ಜಯಂತಿ ಆಚರಣೆ ವೇಳೆ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಪುಷ್ಪ ನಮನ ಮಾಡಿ ಮಾತನಾಡಿದರು. ಶಿಕ್ಷಕರಾದ ವಾಣಿ, ಪಾಂಡುರಂಗ, ಎಸ್ ರಾಮಪ್ಪ, ದೇವರಾಜ್, ಮಾರೇಶ್, ಮಂಜುನಾಥ್, ಮೀನಾಕ್ಷಿ,ಸುಧಾ, ರಜೀಯಾ, ಸೇರಿದಂತೆ ಮಕ್ಕಳು ಇತರರು ಇದ್ದರು.

ಎಮ್ಮಿಗನೂರು ಗ್ರಾಮದ ಸರಕಾರಿ ಶತಮಾನ ಶಾಲೆಯಲ್ಲಿ ಗುರುವಾರ ಛತ್ರಪತಿ ಶಿವಾಜಿ ಜಯಂತಿ ಆಚರಿಸಲಾಯಿತು

ಶಿವಾಜಿ ಅಪ್ರತಿಮ ರಾಷ್ಟ್ರಪ್ರೇಮಿ

ಕೊಟ್ಟೂರು : ದೇಶ ಕಂಡ ಅಪ್ರತಿಮ ರಾಷ್ಟ್ರಪ್ರೇಮಿ ಶಿವಾಜಿ ಜಯಂತಿಯನ್ನು ಆಚರಿಸುವುದರಿಂದ ಅವರು ಈ ದೇಶಕ್ಕೆ ಕೊಟ್ಟಂತಹ ಸೈನಿಕ ಆಡಳಿತಾತ್ಮಕ ವಿಚಾರಗಳನ್ನು ಈ ದೇಶದ ಯುವ ಪೀಳಿಗೆಗೆ ತಲುಪಿಸಲು ಸಾಧ್ಯ ಎಂದು ಕೊಟ್ಟೂರೇಶ್ವರ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಎಂ. ರವಿಕುಮಾರ್ ಹೇಳಿದರು

ಪಟ್ಟಣದ ಕೊಟ್ಟೂರೇಶ್ವರ ಮಹಾವಿದ್ಯಾಲಯದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ಇತಿಹಾಸ ವಿಭಾಗ ಹಾಗೂ ಐಕ್ಯೂ ಎಸಿ ಸಹಯೋಗದೊಂದಿಗೆ ಆಚರಿಸಿ ಮಾತನಾಡಿದ;ರು.

ವಿದ್ಯಾರ್ಥಿಗಳು ಅವರ ಚರಿತ್ರೆಯನ್ನು ಓದುವುದರ ಮುಖಾಂತರವಾಗಿ ಅವರ ಆದರ್ಶ ವ್ಯಕ್ತಿತ್ವವನ್ನು ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು

ನಂತರ ವಿಶೇಷ ಉಪನ್ಯಾಸ ನೀಡಲು ಆಗಮಿಸಿದ್ದ ಎಸ್.ಜಿ.ಎಸ್. ಸರ್ಕಾರಿ ಪದವಿಪೂರ್ವ ಕಾಲೇಜಿನ ಇತಿಹಾಸ ಉಪನ್ಯಾಸಕರಾದ ಸಕ್ರಪ್ಪ ರಡ್ಡಿ ಅವರು ಮಾತನಾಡಿ, ಛತ್ರಪತಿ ಶಿವಾಜಿ ಮಹಾರಾಜರು ದೇಶ ಕಂಡ ಅಪ್ರತಿಮ ದೇಶಭಕ್ತ ರಾಷ್ಟ್ರ ಪ್ರೇಮಿ ಇಂತಹವರ ಜಯಂತಿಯನ್ನು ಆಚರಿಸುವುದು ಬಹಳ ಸೂಕ್ತವಾಗಿದೆ ಎಂದು ಹೇಳುವುದರ ಮುಖಾಂತರ ಶಿವಾಜಿ ಮಹಾರಾಜರ ಜೀವನ ಅವರ ಸೈನಿಕ ಸಾಧನೆಗಳು ಅವರ ಆಡಳಿತಾತ್ಮಕ ಸುಧಾರಣೆಗಳನ್ನು ಮನಮುಟ್ಟುವಂತೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಡಾ. ಶಿವಕುಮಾರ್, ರಶ್ಮಿ, ಚಂದ್ರಕಾಂತ್, ವೀ ಕೊಟ್ರೇಶ್ ಉಪಸ್ಥಿರಿದರು. ಸಿಂಧು ನಿರೂಪಿಸಿದರು. ಭಾರತಿ ನಿರೂಪಿಸಿದರು. ಶಿವಪ್ರಕಾಶ್ ಅವರು ಸ್ವಾಗತಿಸಿ ವಂದಿಸಿದರು.

20–02–2026ರಿಂದ ವೈಭವದ ಪ್ರಾರಂಭ
ಶ್ರೀನಿವಾಸ–ರಬಕವಿ 4 ಅಟಗಳು | ಶ್ರೀನಿವಾಸ–ರಾಮದುರ್ಗ 4 ಅಟಗಳು | ಅಂಕಿತಾ–ಗುಳೇದಗುಡ್ಡ 4 ಅಟಗಳು
ಶ್ರೀವೀಣಾ–ರಾಣೇಬೆನ್ನೂರ 4 ಅಟಗಳು | ಸ್ಮಾರ್ಟಮೂವಿ–ಬಾಗಲಕೋಟ 4 ಅಟಗಳು | ಶ್ರೀ ಕುಮಾರೇಶ್ವರ–ಬದಾಮಿ 4 ಅಟಗಳು
ಪದ್ಮಶ್ರೀ ಎಂಟರ್ ಪ್ರೈಸಸ್ 51 ವರ್ಷಗಳ ನಂತರ ಹೊಸ ತಂತ್ರಜ್ಞಾನದಲ್ಲಿ ನಿಮ್ಮ ಮುಂದೆ. ಸಿನಿಮಾಸ್ಕೋಪ್ ಹಾಗೂ 5.1 DTS ನಲ್ಲಿ ಮೂಡಿ ಬಂದಿದೆ.

ಬಾಂಬೆ ಕರ್ನಾಟಕಕ್ಕೆ ಹಂಚಿಕೆದಾರರು
ದಯಾನಂದ ಚಿಕ್ಕಮಠ. 8861078946
ಶ್ರೀ ಆರ್.ವಿ. ಫಿಲಂಸ್, ಬೈಲಹೊಂಗಲ 8861078946

ಕಾರ್ ಡಿಕ್ಕಿ

ಪಣಜಿ: ನಾಯಕವಾಡೊ–ಕಲಂಗುಟ್ ನಲ್ಲಿ ಪ್ರವಾಸಿ ಕಾರು ಬುಧವಾರ ರಾತ್ರಿ ರಸ್ತೆಬದಿಯ ವಿದ್ಯುತ್ ಟ್ರಾನ್ಸಫಾರ್ಮರ್ ಗೆ ಡಿಕ್ಕಿ ಹೊಡೆದ ಪರಿಣಾಮ ಭಾರಿ ಬೆಂಕಿ ಕಾಣಿಸಿಕೊಂಡಿದೆ. ಅಪಘಾತದಲ್ಲಿ ಕಾರಿನಲ್ಲಿದ್ದ ಒಬ್ಬ ಪ್ರವಾಸಿ ಗಾಯಗೊಂಡಿದ್ದು, ಟ್ರಾನ್ಸ್‌ಫಾರ್ಮರ್ ಸಂಪೂರ್ಣವಾಗಿ ನಾಶವಾಗಿದೆ. ಗುಜರಾತ್‌ನ ಪ್ರವಾಸಿಗರ ಕಾರು ಕಲಂಗುಟ್ ನಿಂದ ಕಾಂದೋಳಿ ಕಡೆಗೆ ಹೋಗುತ್ತಿತ್ತು. ಈ ಸಮಯದಲ್ಲಿ, ಚಾಲಕನ ನಿಯಂತ್ರಣ ತಪ್ಪಿ ಕಾರು ಮೊದಲು ರಸ್ತೆಬದಿಯಲ್ಲಿ ನಿಂತಿದ್ದ ವಾಹನಕ್ಕೆ ಮತ್ತು ನಂತರ ವಿದ್ಯುತ್ ಟ್ರಾನ್ಸಫಾರ್ಮರ್ ಗೆ ಡಿಕ್ಕಿ ಹೊಡೆದಿದೆ. ಪರಿಣಾಮ, ಟ್ರಾನ್ಸ್‌ಫಾರ್ಮರ್ ಕ್ಷಣಾರ್ಧದಲ್ಲಿ ಬೆಂಕಿಗೆ ಆಹುತಿಯಾಯಿತು.

ಅಜ್ಜಯ್ಯನ ಕ್ಷೇತ್ರದ ದರ್ಶನ

ಕುರುಗೋಡು : ಸಮಾಜದ ಎಲ್ಲ ವರ್ಗಗಳ ಭಕ್ತರು ತಮ್ಮ ಕಷ್ಟ, ಸಮಸ್ಯೆ ಹೇಳಿಕೊಂಡು ಪರಿಹಾರ ಕಂಡುಕೊಳ್ಳಲು ಉಕ್ಕಡಗಾತ್ರಿ ಅಜ್ಜಯ್ಯನ ಕ್ಷೇತ್ರಕ್ಕೆ ಭಕ್ತಿಯಿಂದ ಹೋಗಿ ದರ್ಶನ ಪಡೆದುಕೊಂಡು ಬರುತ್ತಿದ್ದಾರೆ ಎಂದು ಪೌರೋಹಿತ್ಯ ವಹಿಸಿದ್ದ ಹಿರೇಮಠದ ಕಿರಣ್ ಶಾಸ್ತ್ರೀ ಅವರು ತಿಳಿಸಿದರು. ಸಮೀಪದ ಹೆಚ್. ವೀರಾಪುರ ಗ್ರಾಮದಲ್ಲಿ ನಡೆದ ಉಕ್ಕಡಗಾತ್ರಿ ಕರಿಬಸವಜ್ಜನ ಮಹಾರಥೋತ್ಸವದ ಅಂಗವಾಗಿ ಗೋಡೆ ನಾಗಭೂಷಣ ಶ್ರೀಮತಿ ನೀಲಮ್ಮ ಕುಟುಂಬದವರು ಹಮ್ಮಿಕೊಂಡಿದ್ದ ಕರಿಬಸವಜ್ಜನ ಪೂಜೆ ಹಾಗೂ ಮಹಾದಾಸೋಹ ಕಾರ್ಯಕ್ರಮ ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಭಕ್ತರು ಫಳಾರ(ಮಂಡಕ್ಕಿ), ಹೂವು, ಹಣ್ಣು, ಕಾಯಿ, ಕರ್ಪೂರ, ಊದುಬತ್ತಿಗಳನ್ನು ಅಜ್ಜಯ್ಯನಿಗೆ ಅರ್ಪಿಸಿ ಭಕ್ತಿ ಸಮರ್ಪಿಸಿ, ಒಳ್ಳೆಯ ಮಳೆ, ಬೆಳೆಗಾಗಿ ಬೇಡಿಕೊಂಡರು.

ಗೋಡೆ ನಾಗಭೂಷಣ, ನೀಲಮ್ಮ, ಅರ್ಚಕ ಬಸವರಾಜಸ್ವಾಮಿ, ಅಂಬರೀಶ್ ಗೌಡ, ಬಸಮ್ಮ, ಗ್ರಾಮದ ಭಕ್ತರು ಹಾಜರಿದ್ದರು. ಆಗಮಿಸಿದ ಭಕ್ತರು ಕರಿಬಸವೇಶ್ವರ ಅಜ್ಜಯ್ಯನ ಆಶೀರ್ವಾದ ಪಡೆದು ಪ್ರಸಾದ ಸ್ವೀಕರಿಸಿದರು.

ಉಕ್ಕಡಗಾತ್ರಿ ಅಜ್ಜಯ್ಯನ ಕ್ಷೇತ್ರಕ್ಕೆ ಭಕ್ತರು ಆಗಮಿಸಿ ದರ್ಶನ ಪಡೆದರು.

ಇಂದಿನಿಂದ ವೈಭವದ ಪ್ರಾರಂಭ!
-ಹುಬ್ಬಳ್ಳಿ | ಅಮೀರ-ಬಿಜಾಪುರ | ಮಹಾಂತೇಶ-ಇಳಕಲ್ಲ | ಕರ್ನಾಟಕ-ಗೋ